REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 47 । ಮಾರ್ಚ್ 2, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ಮಹಾಮಂಡಳವು ನಡೆಸುತ್ತಿರುವ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ 7ನೇ ಬ್ಯಾಚಿನ ಲಿಖಿತ ಪರೀಕ್ಷೆಗಳು ದಿನಾಂಕ : 26.02.2022 ಮತ್ತು 27.02.2022ರಂದು ಜರುಗಿದವು

**ಬೆಂಗಳೂರು :** ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ 7ನೇ ಬ್ಯಾಚ್‌ನ ನಾಲ್ಕು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 26 ಮತ್ತು 27ನೇ ಫೆಬ್ರವರಿ 2022ರಂದು ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯಲ್ಲಿ ಜರುಗಿದವು. ಉಳಿದ ಎರಡು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 06.03.2022ರಂದು ಜರುಗಲಿವೆ.










**ಬೆಳಗಾವಿ :** ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ 7ನೇ ಬ್ಯಾಚ್‌ನ ನಾಲ್ಕು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 26 ಮತ್ತು 27ನೇ ಫೆಬ್ರವರಿ 2022ರಂದು ಮಹಾಮಂಡಳದ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಜರುಗಿದವು. ಉಳಿದ ಎರಡು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 06.03.2022ರಂದು ಜರುಗಲಿವೆ.





ರಷ್ಯಾ-ಉಕ್ರೇನ್ ಬಿಕ್ಕಟ್ಟು : ಆರ್ಥಿಕ ಚೇತರಿಕೆ ಕಷ್ಟ ಎಂದ ರಾಜನ್ 2

ಸುಸ್ಥಿರ ಆರ್ಥಿಕ ಚೇತರಿಕೆ ಸರ್ಕಾರದ ಗುರಿ : ನಿರ್ಮಲಾ ಸೀತಾರಾಮನ್ 4

ನಿಮ್ಮ ಪ್ರಶ್ನೆ - ನಮ್ಮ ಉತ್ತರ 7

## ಆತ್ಮೀಯ ಸಹಕಾರಿಗಳೇ...



# ಭವಿಷ್ಯದೆಡೆಗೆ ಭರವಸೆಯ ಹೆಜ್ಜೆ ಸಾಕಾರಗೊಳ್ಳಲಿ

ಇತ್ತೀಚೆಗೆ ನಡೆದ ಆರ್‌ಬಿಐ ಹಣಕಾಸು ನೀತಿ ಸಮಿತಿಯ ಸಭೆಯ ನಂತರ ಮಾತನಾಡಿದ್ದ ಗವರ್ನರ್ ಶಕ್ತಿಕಾಂತ ದಾಸ್ ಅವರು, ದೇಶದ ಮಾರುಕಟ್ಟೆಗಳಲ್ಲಿ ಉತ್ಪನ್ನಗಳು ಮತ್ತು ಸೇವೆಗಳಿಗೆ ಸಾರ್ವಜನಿಕರಿಂದ ಬರುವ ಬೇಡಿಕೆಯು ಕೋವಿಡ್ ಪೂರ್ವದ ಹಂತವನ್ನು ಇನ್ನೂ ತಲುಪಿಲ್ಲ ಎಂದು ಹೇಳಿದ್ದಾರೆ. ಅಲ್ಲದೆ, ದೇಶವಿನ್ನೂ ಬಾರೀ ಹಣದುಬ್ಬರದಿಂದ ನರಳುತ್ತಿದೆ ಎಂದಿದ್ದಾರೆ.

ದೇಶದ ಮಧ್ಯಮ ವರ್ಗದ ಜನ, ಗ್ರಾಮೀಣ ಕೃಷಿಕ ಸಮುದಾಯ, ಕಾರ್ಮಿಕ ವರ್ಗ, ನೌಕರ ವರ್ಗ, ವೇತನ ಕಡಿತ ಮತ್ತು ಹಣದುಬ್ಬರದ ಹಿನ್ನೆಲೆಯ ಸಂಕಷ್ಟದಿಂದ ಹೊರಬರಲು ಸರ್ಕಾರದ ನೆರವನ್ನು ನಿರೀಕ್ಷಿಸಿದ್ದವು. ಅಲ್ಲದೆ, ಸಣ್ಣ ಕೈಗಾರಿಕೆಗಳ ವಲಯಕ್ಕೆ ಯಾವುದೇ ಉತ್ತೇಜನ ದೊರಕದಿರುವುದರಿಂದ ಅವು ಸ್ಥಗಿತಗೊಂಡಿರುವ ಕಾರಣ; ದುಡಿಯುವ ಕಾರ್ಮಿಕರು ಹತಾಶಗೊಂಡಿದ್ದಾರೆ. ಕೇಂದ್ರ ತನ್ನ ತಪ್ಪು ಆರ್ಥಿಕ ನಡೆಗಳಿಂದ ಬಾರಿ ಸಾಲದ ಸುಳಿಗೆ ಸಿಲುಕಿ, ಬಿರಿ ಸಿರಿವಂತ ವರ್ಗವನ್ನು ಓಲೈಸುತ್ತಿದೆ.

ಈ ಕಾರಣದಿಂದಾಗಿಯೇ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ಅನುದಾನವೂ ಕಡಿಮೆಯಾಗುತ್ತಿದೆ. ಈ ಪರಿಸ್ಥಿತಿಯಿಂದಾಗಿ ಕೇವಲ ಮೂರೇ ವರ್ಷದಲ್ಲಿ ರಾಜ್ಯ ಸರ್ಕಾರದ ಸಾಲದ ಪ್ರಮಾಣ ದ್ವಿಗುಣಗೊಂಡಿದೆ. ಹಿಂದೆ ಕೇಂದ್ರದ ಯೋಜನೆಗೆ ಕೇಂದ್ರದ ಪಾಲು ಶೇ.75 ರಿಂದ 80ರಷ್ಟು ಇತ್ತು. ಆದರೆ, ಈಗ ಕೇಂದ್ರ ತಾನು ನೀಡುವ ಪಾಲನ್ನು ಶೇ.50ಕ್ಕೆ ಇಳಿಸಿದೆ. ಇದರಿಂದ ರಾಜ್ಯ ಸರ್ಕಾರ ಯೋಜನೆಗಳಿಗೆ ಅಧಿಕ ವೆಚ್ಚ ಮಾಡಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಜತೆಗೆ, ಬರುವ ಜೂನ್ ತಿಂಗಳಿಗೆ ರಾಜ್ಯಗಳಿಗೆ ನೀಡುತ್ತಿದ್ದ ಜಿ.ಎಸ್.ಟಿ ಪರಿಹಾರವೂ ನಿಂತು ಹೋಗುತ್ತದೆ. ಇದರಿಂದ ಕನಿಷ್ಠ ರೂ.20,000 ಕೋಟಿ ರೂಪಾಯಿ ನಷ್ಟ ರಾಜ್ಯಕ್ಕಾಗುತ್ತದೆ. ಈ ಬಾರಿಯ ಕೇಂದ್ರ ಸರ್ಕಾರದ ರೂ. 39.45 ಲಕ್ಷ ಕೋಟಿ ಗಾತ್ರದ ಬಜೆಟ್‌ನಲ್ಲಿ ರಾಜ್ಯಕ್ಕೆ ಏನೇನೂ ದೊರಕಿಲ್ಲ ಹಾಗೂ ನನೆಗುದಿಗೆ ಬಿದ್ದಿರುವ ನೀರಾವರಿಗೆ ಯಾವುದೇ ಅನುದಾನವನ್ನು ನೀಡಲಾಗಿಲ್ಲ.

ಇದರಿಂದಾಗಿ ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಿಂದ ಪ್ರತೀ ಬಜೆಟ್‌ನಲ್ಲೂ ಸಾಲ ಮಾಡುತ್ತಿದೆ. ಹೀಗೆ ಮೂರೇ ವರ್ಷಕ್ಕೆ ರೂ. 2ಲಕ್ಷ 15 ಸಾವಿರ ಕೋಟಿ ಸಾಲ ಮಾಡಿದೆ. ಸಾಲದ ಸುಳಿಯಲ್ಲಿ ಸಿಲುಕಿರುವ ಸರ್ಕಾರ ಹೆಚ್ಚು ಬಡ್ಡಿ ಕಟ್ಟುವ ಸ್ಥಿತಿ ನಿರ್ಮಾಣವಾಗಿದೆ. ಇನ್ನು ನೀರಾವರಿ ಯೋಜನೆಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ ಎಲ್ಲಿಂದ ಹಣ ಹೊಂದಿಸಲು ಸಾಧ್ಯ? ನಾನು ಗಮನಿಸಿದ ಹಾಗೆ ಸಧ್ಯ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗಲಿ, ನೀರಾವರಿ ಕೆಲಸಗಳಾಗಲಿ ನಡೆಯುತ್ತಿಲ್ಲ. ವಾಸ್ತವ ಸ್ಥಿತಿ ಹೀಗಿರುವಾಗ; ಇದೇ ವಾರ ತಾವು ಮಂಡಿಸಲಿರುವ ಬಜೆಟ್‌ನಲ್ಲಿ ನಾಡಿನ ಮುಂದಿನ ದಿನಗಳ ಪ್ರಗತಿಯ ಭವಿಷ್ಯ ಬರೆಯುವುದಾಗಿಯೂ, ಭವಿಷ್ಯದೆಡೆಗೆ ಭರವಸೆಯ ಹೆಜ್ಜೆ ಇಡುವುದಾಗಿಯೂ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ತಮ್ಮ ಮಾತುಗಳನ್ನು ಸಾಕಾರಗೊಳಿಸಲಿ ಎಂದು ಹಾರೈಸುವೆ.

**ಎಚ್.ಕೆ. ಪಾಟೀಲ**
ಅಧ್ಯಕ್ಷರು

# ರಷ್ಯಾ–ಉಕ್ರೇನ್ ಬಿಕ್ಕಟ್ಟು : ಆರ್ಥಿಕ ಚೇತರಿಕೆ ಕಷ್ಟ ಎಂದ ರಾಜನ್



**ಹೊಸದಿಲ್ಲಿ** : ರಷ್ಯಾ–ಉಕ್ರೇನ್ ಬಿಕ್ಕಟ್ಟು ಕೇವಲ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ವಲಯಕ್ಕೆ ಸೀಮಿತವಾಗುವ ಸಾಧ್ಯತೆ ಇಲ್ಲ ಎಂದು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ರಾಜನ್ ತಿಳಿಸಿದ್ದಾರೆ.

ಆಹಾರ ಧಾನ್ಯಗಳ ದರಗಳೂ ವೃದ್ಧಿಸಬಹುದು. ಗೋಧಿ ರಫ್ತಿನ ಮೇಲೆ ರಷ್ಯಾ – ಉಕ್ರೇನ್ ಮುಂಚೂಣಿಯಲ್ಲಿದ್ದು, ಅವುಗಳ ದರ ಹೆಚ್ಚಳವಾಗಬಹುದು ಎಂದು ರಾಜನ್ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆ ತೀವ್ರ ಸಂಕಷ್ಟದಲ್ಲಿದೆ. ರಷ್ಯಾ – ಉಕ್ರೇನ್ ಸಂಘರ್ಷದಿಂದ ಚೇತರಿಕೆ ಮತ್ತಷ್ಟು ಕ್ಲಿಷ್ಟಕರವಾಗಿದೆ. ಯುರೋಪ್‌ನಲ್ಲಿ ಅನಿಲ–ಕಚ್ಚಾ ತೈಲಕ್ಕೆ ಹಾಹಾಕಾರ ಏರ್ಪಡಬಹುದು. ಒಪೆಕ್ ರಾಷ್ಟ್ರಗಳು ಇರಾನ್ ಬೆಂಬಲದೊಡನೆ ತೈಲೋತ್ಪಾದನೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ ಎಂದರು. ಪ್ರಮುಖ ಕೈಗಾರಿಕಾ ರಾಷ್ಟ್ರಗಳಲ್ಲಿ ಹಣದುಬ್ಬರ ಇಳಿಕೆಯಾದರೆ, ಅಮೆರಿಕದಲ್ಲಿ ತಗ್ಗಿದರೆ, ಅಲ್ಲಿನ ಫೆಡರಲ್ ರಿಸರ್ವ್ ಬಡ್ಡಿ ದರದ ಬಗ್ಗೆ ಸ್ಪಷ್ಟ ನಿರ್ಧಾರ ತಳೆಯಬಹುದು. ಜಾಗತಿಕ ಆರ್ಥಿಕತೆಯ ಸಮತೋಲನಕ್ಕೆ ಪೂರಕವಾದ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದರು.

**ಹೆಚ್ಚುವರಿ ತೈಲ ದಾಸ್ತಾನಿಗೆ ಚಿಂತನೆ** : ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಬ್ಯಾರೆಲ್‌ಗೆ 100 ಡಾಲರ್‌ಗಳ ಗಡಿ ದಾಟಿರುವ ಹಿನ್ನೆಲೆಯಲ್ಲಿ ಭಾರತವು ಕಚ್ಚಾ ತೈಲ ದಾಸ್ತಾನನ್ನು ಹೆಚ್ಚಿಸಲು ಮುಂದಾಗಿದೆ. ಈಗಾಗಲೇ ಸಾರ್ವಜನಿಕ ತೈಲ ಕಂಪನಿಗಳಲ್ಲಿ ತೈಲಕ್ಕೆ ಬೇಡಿಕೆ ಹೆಚ್ಚುತ್ತಿರುವುದರಿಂದ, ಶೀಘ್ರದಲ್ಲಿಯೇ ಸ್ಟೋರೇಜ್ ಟ್ಯಾಂಕ್‌ಗಳೂ ಲಭಿಸಲಿವೆ.

ಸದ್ಯಕ್ಕೆ 80 ಲಕ್ಷ ಬ್ಯಾರೆಲ್ ತೈಲ ದಾಸ್ತಾನಿಗೆ ಅವಕಾಶ ಇದೆ ಎಂದು ಮೂಲಗಳು ತಿಳಿಸಿವೆ. ವಿದೇಶಿ ಮತ್ತು ಸ್ಥಳೀಯ ಕಂಪನಿಗಳೂ ತೈಲ ದಾಸ್ತಾನಿಗೆ ಆಸಕ್ತಿ ವಹಿಸಿವೆ. ದಕ್ಷಿಣ ಭಾರತದಲ್ಲಿ ಮಂಗಳೂರು, ವಿಜಾಗ್‌ನಲ್ಲಿ ತೈಲ ದಾಸ್ತಾನು ಕೇಂದ್ರಗಳ ವ್ಯವಸ್ಥೆ ಇದೆ. ವ್ಯೂಹಾತ್ಮಕ ಉದ್ದೇಶಗಳಿಗೆ ಭಾರತ 53.3 ಲಕ್ಷ ಟನ್‌ತೈಲ ದಾಸ್ತಾನು ಸಾಮರ್ಥ್ಯವನ್ನು ಹೊಂದಿದೆ.

# 8th Batch ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ. ಈಗಾಗಲೇ 6ಬ್ಯಾಚ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 7ನೇ ಬ್ಯಾಚ್‌ನ ಪರೀಕ್ಷೆಗಳು ಸದ್ಯದಲ್ಲಿಯೇ ಜರುಗಲಿವೆ. ಈಗ 8ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮಹಾಮಂಡಳವು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸಂಪರ್ಕ ತರಗತಿಗಳನ್ನು ಮತ್ತು ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಪ್ರಯುಕ್ತ, ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು ಸದರಿ ಕೋರ್ಸ್‌ಗೆ ನೋಂದಣಿ ಮಾಡಿಸುವಾಗ ಯಾವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದೀರೆಂದು ಕಡ್ಡಾಯವಾಗಿ ನೋಂದಣಿ ಅರ್ಜಿಯಲ್ಲಿ ತಿಳಿಸಬೇಕು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನುಕೂಲವಾಗುತ್ತದೆ.

ಅರ್ಜಿಯನ್ನು ಭರ್ತಿ ಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಲು ಕೊನೆಯ ದಿನಾಂಕ:25.03.2022 ಆಗಿರುತ್ತದೆ. ಆದ್ದರಿಂದ ಕೊನೆಯ ದಿನದವರೆಗೆ ಕಾಯದೆ ಬೇಗನೆ ಅರ್ಜಿಗಳನ್ನು ಭರ್ತಿಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಬೇಕು. ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.4,500 + (ಜಿಎಸ್‌ಟಿ) 810 = ಒಟ್ಟು ರೂ. 5,310/-ಗಳನ್ನು ನಿಗದಿಪಡಿಸಲಾಗಿದೆ. ಈಗಾಗಲೇ ತಮ್ಮ ಬ್ಯಾಂಕಿನ ಇ-ಮೇಲ್ ವಿಳಾಸಕ್ಕೆ ಕೋರ್ಸ್‌ಗೆ ಸಂಬಂಧಿಸಿದ ಅರ್ಜಿ ಫಾರಂ ಮತ್ತು ವಿವರಗಳನ್ನು ಕಳುಹಿಸಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಶ್ರೀನಿವಾಸ್ ಹೆಚ್.ಸಿ. (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.

# ಮೊಬೈಲ್ ಆಧಾರಿತ ಸಾಲದ ಆ್ಯಪ್ ಕ್ಯಾಶ್ ಬೀನ್ ಪರವಾನಗಿ ರದ್ದು ಮಾಡಿದ ಆರ್‌ಬಿಐ



ನವದೆಹಲಿ: ದೆಹಲಿ ಮೂಲದ ಪಿಸಿ ಫೈನಾನ್ಷಿಯಲ್ ಸರ್ವೀಸಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಕ್ಯಾಷ್‌ಬೀನ್ ಆ್ಯಪ್ ನಿಷೇಧಿಸಿರುವ ಆರ್‌ಬಿಐ, ಮೊಬೈಲ್ ಆಧಾರಿತ ಸಾಲ ನೀಡುವ ಆ್ಯಪ್‌ಗಳ ವಿರುದ್ಧ ಸಮರ ಸಾರಿದ್ದು, ಕಠಿಣ ಕ್ರಮದ ಸಂದೇಶವನ್ನು ರವಾನಿಸಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್-1934ರ ಸೆಕ್ಷನ್ 45-IA (6) (iv) ಅಡಿಯಲ್ಲಿ ನೀಡಲಾದ ಅಧಿಕಾರದ ವ್ಯಾಪ್ತಿಯಲ್ಲಿ ರಿಸರ್ವ್ ಬ್ಯಾಂಕ್ ಎಂ/ಎಸ್ ಪಿಸಿ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು (CoR) ರದ್ದುಗೊಳಿಸಲಾಗಿದೆ ಎಂದು ಆರ್‌ಬಿಐ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

1934ರ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆಯ ಸೆಕ್ಷನ್ 45-Iನ ಷರತ್ತು (ಎ) ನಲ್ಲಿ ವ್ಯಾಖ್ಯಾನಿಸಿದಂತೆ ಬ್ಯಾಂಕಿಂಗ್ ಅಲ್ಲದ ಹಣಕಾಸು ಸಂಸ್ಥೆಯ (ಎನ್‌ಬಿಎಫ್‌ಐ) ವ್ಯವಹಾರ ನಡೆಸುವುದಿಲ್ಲ ಎಂದು ಬ್ಯಾಂಕ್ ಹೇಳಿದೆ. ಪಿಸಿ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಪ್ರಾಥಮಿಕವಾಗಿ ಕ್ಯಾಶ್‌ಬೀನ್ ಎಂಬ ಮೊಬೈಲ್ ಅಪ್ಲಿಕೇಶನ್ ಮೂಲಕ ಮೊಬೈಲ್ ಅಪ್ಲಿಕೇಶನ್ ಆಧಾರಿತ ಸಾಲ ನೀಡುವ ಸೇವೆಯಲ್ಲಿ ತೊಡಗಿಸಿಕೊಂಡಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.

ಕ್ಯಾಶ್‌ಬೀನ್ ವಿರುದ್ಧ ಕ್ರಮ ಯಾಕೆ? : ಕ್ಯಾಶ್‌ಬೀನ್ ಮೊಬೈಲ್ ಅಪ್ಲಿಕೇಶನ್ ಗೂಗಲ್ ಪ್ಲೇ ಮತ್ತು ಆಪ್‌ನಲ್ಲಿಯೇ 1 ಕೋಟಿಗೂ ಹೆಚ್ಚು ಡೌನ್‌ಲೋಡ್‌ಗಳನ್ನು ಹೊಂದಿದೆ. ಮೊಬೈಲ್ ಆಧಾರಿತ ಡಿಜಿಟಲ್ ಲೆಂಡಿಂಗ್ ಅಪ್ಲಿಕೇಶನ್‌ಗಳ ಕಾರ್ಯನಿರ್ವಹಣೆಯ ವಿರುದ್ಧ ಆರ್‌ಬಿಐ ಹಲವಾರು ದೂರುಗಳನ್ನು ಸ್ವೀಕರಿಸಿತ್ತು. ಹೀಗಾಗಿ ಮೊದಲ ಹೆಜ್ಜೆಯಾಗಿ ಆ್ಯಪ್ ವಿರುದ್ಧ ಕಠಿಣ ಕ್ರಮ ಕೈಗೊಂಡಿದೆ.

ಸುಲಭವಾಗಿ ಸಾಲ ನೀಡುವ ಹೆಸರಿನಲ್ಲಿ ಅಗತ್ಯವಿರುವ ಸಾಲಗಾರರಿಗೆ ಮೊದಲು ಆಮಿಷಗಳನ್ನು ಒಡ್ಡಿ ಆ ನಂತರ ಭಾರಿ ಬಡ್ಡಿ ದರಗಳನ್ನು ವಿಧಿಸುವ ಹಾಗೂ ಸಾಲದ ವಸೂಲಾತಿ ವಿಚಾರದಲ್ಲಿ ಕಿರುಕುಳ ನೀಡುತ್ತಾರೆ ಎಂಬ ಆರೋಪಗಳನ್ನು ಈ ಮೊಬೈಲ್ ಆ್ಯಪ್ ಆಧಾರಿತ ಸಾಲ ನೀಡುವ ಸಂಸ್ಥೆಗಳು ಎದುರಿಸುತ್ತಿವೆ.

## ಸುಸ್ಥಿರ ಆರ್ಥಿಕ ಚೇತರಿಕೆ ಸರ್ಕಾರದ ಗುರಿ : ನಿರ್ಮಲಾ ಸೀತಾರಾಮನ್



**ಮುಂಬೈ** : ಅರ್ಥ ವ್ಯವಸ್ಥೆಯ ಚೇತರಿಕೆಯು ಸುಸ್ಥಿರವಾಗಿ ಇರಬೇಕು ಎಂಬುದು ಸರ್ಕಾರದ ಬಯಕೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಮೂಲಸೌಕರ್ಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಇರುವ ಪ್ರಸ್ತಾವಗಳು ಹೂಡಿಕೆ ಹೆಚ್ಚಿಸಿ, ಆದಾಯ ಹೆಚ್ಚಿಸುವಂಥವು ಎಂದು ಅವರು ಪ್ರತಿಪಾದಿಸಿದರು.

ಉದ್ಯಮದ ಪ್ರತಿನಿಧಿಗಳ ಜೊತೆ ಮಾತುಕತೆಯಲ್ಲಿ ಪಾಲ್ಗೊಂಡ ಅವರು, 'ಸಾಂಕ್ರಾಮಿಕದ ಸಂದರ್ಭದಲ್ಲಿ ತೊಂದರೆಗೆ ಒಳಗಾದವರಿಗೆ ಹಣ ವರ್ಗಾವಣೆ ಮಾಡುವಲ್ಲಿ ತಂತ್ರಜ್ಞಾನ ನೆರವಿಗೆ ಬಂದಿದೆ. ಶಿಕ್ಷಣ ಹಾಗೂ ಕೃಷಿ ವಲಯಗಳಲ್ಲಿ ಡಿಜಿಟಲ್ ತಂತ್ರಜ್ಞಾನದ ನೆರವು ಪಡೆಯುವುದು ಹೇಗೆ ಎಂಬ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ' ಎಂದರು.

## ಸಹಕಾರ ರತ್ನ ಪುರಸ್ಕೃತ, ಮಾಜಿ ಶಾಸಕರಾದ ಶ್ರೀ ಹೆಚ್.ಡಿ. ಚೌಡಯ್ಯ ನವರ ನಿಧನ

ಮಂಡ್ಯ ಜಿಲ್ಲೆಯ ರೈತ ಮುಖಂಡರು, ಶ್ರೇಷ್ಠ ಸಹಕಾರಿಗಳು, ಸಹಕಾರ ರತ್ನ ಪುರಸ್ಕೃತರು, ಮಾಜಿ ಶಾಸಕರಾದ ಹೆಚ್.ಡಿ. ಚೌಡಯ್ಯನವರು ನಿಧನರಾದುದು ಅತ್ಯಂತ ನೋವುಂಟು ಮಾಡಿದೆ. ರೈತ ಬಂಧುವಾಗಿ, ಸಹಕಾರಿ ಮುಖಂಡರಾಗಿ, ನಾಡಿನ ನೆಲ, ಜಲ ಹೋರಾಟದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ನಾಡಿನ ಜನತೆಯ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು.



ಮಂಡ್ಯ ತಾಲ್ಲೂಕಿನ ಹೊಳಲು ಗ್ರಾಮದವರಾದ ಹೆಚ್.ಡಿ.ಚೌಡಯ್ಯನವರು ಸಹಕಾರ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. 1960 ರಿಂದ 1968ರವರೆಗೆ ಮಂಡ್ಯ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ನಂತರ ರಾಜಕೀಯ ಪ್ರವೇಶಿಸಿದ ಹೆಚ್.ಡಿ. ಚೌಡಯ್ಯನವರು ನಾಲ್ಕು ಬಾರಿ ಶಾಸಕರಾಗಿ, ಒಮ್ಮೆ ವಿಧಾನಪರಿಷತ್ ಸದಸ್ಯರಾಗಿ ಹಾಗೂ ವಿಧಾನಪರಿಷತ್ ವಿರೋಧಪಕ್ಷದ ನಾಯಕರಾಗಿದ್ದರು. ಮಂಡ್ಯ ಜಿಲ್ಲೆಯ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಜನತಾ ಶಿಕ್ಷಣ ಸಂಸ್ಥೆ (ಪಿಇಟಿ)ಯ ಸಂಸ್ಥಾಪಕರಾದ ಕೆ.ವಿ. ಶಂಕರಗೌಡರವರ ನಿಧನದ ನಂತರ ಹೆಚ್.ಡಿ. ಚೌಡಯ್ಯನವರು 1990 ರಿಂದ 2020 ರವರೆಗೆ 31 ವರ್ಷಗಳ ಕಾಲ ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಮಹಾತ್ಮಾ ಗಾಂಧಿ ಸ್ಮಾರಕ ಟ್ರಸ್ಟ್‌ನ ಗೌರವಾಧ್ಯಕ್ಷರೂ ಆಗಿದ್ದರು. ನದಿ ನೀರು ಹಂಚಿಕೆ ಚಳುವಳಿಯ ನೇತೃತ್ವ ವಹಿಸಿದ್ದ, ಕಾವೇರಿ ರೈತ ಹಿತರಕ್ಷಣಾ ಸಮಿತಿಯಲ್ಲಿ ಸಕ್ರೀಯರಾಗಿದ್ದರು.

ಮಂಡ್ಯದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದ, ಇವರು ಮಂಡ್ಯ ಜಿಲ್ಲೆಯಲ್ಲಿ ಸಹಕಾರಿ ಚಳುವಳಿ ಉತ್ತುಂಗದೆತ್ತರಕ್ಕೆ ಬೆಳೆಯಲು ಕಾರಣಕರ್ತರಾಗಿದ್ದರು. ಹೆಚ್.ಡಿ. ಚೌಡಯ್ಯನವರ ನಿಧನ ಸಹಕಾರ, ಶಿಕ್ಷಣ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಹೆಚ್.ಡಿ. ಚೌಡಯ್ಯನವರ ನಿಧನಕ್ಕೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

## ಶ್ರೀ ಲಕ್ಷ್ಮೀ ಮಹಿಳಾ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಸುನಿತಾ ಪ್ರಕಾಶ ನಿಧನ



**ಬೆಂಗಳೂರು** : ದಿನಾಂಕ : 18.02.2022ರಂದು ಶ್ರೀ ಲಕ್ಷ್ಮೀ ಮಹಿಳಾ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಸುನಿತಾ ಪ್ರಕಾಶ್ ರವರು ದೈವಾಧೀನರಾಗಿರುತ್ತಾರೆ. ಇವರು ಬ್ಯಾಂಕಿನ ಪ್ರಾರಂಭದಿಂದ ಬ್ಯಾಂಕಿನ ಯಶಸ್ವಿಗೆ ಬಹಳ ಶ್ರಮವಹಿಸಿದ್ದು, ಉಪಾಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿರುತ್ತಾರೆ. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಬ್ಯಾಂಕಿನ ಅಧ್ಯಕ್ಷರು, ನಿರ್ದೇಶಕರು, ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

# ಸಹಕಾರ ಚುನಾವಣಾ ಪ್ರಾಧಿಕಾರ

**ಟಿ.ಟಿ.ಎಂ.ಸಿ ಕಟ್ಟಡ, 3ನೇ ಮಹಡಿ, ಎ–ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027**

**ಸಂಖ್ಯೆ:ಸಚುಪ್ರಾ/ಆಡಳಿತ/ಕೋವಿಡ್–19/6(6)/ಸುತ್ತೋಲೆ/2022** **ದಿನಾಂಕ : 11.02.2022**

## ಚುನಾವಣಾ ತುರ್ತು

## ಸುತ್ತೋಲೆ

**ವಿಷಯ : ಸಹಕಾರ ಸಂಘಗಳ /ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ.**

**ಉಲ್ಲೇಖ : 1)ಸರ್ಕಾರದ ಪತ್ರ ಸಂಖ್ಯೆ:ಸಿಒ.03.ಸಿ.ಎಲ್.ಎಮ್.2022(ಇ) ದಿನಾಂಕ:19.01.2022**

**2) ಈ ಕಛೇರಿ ಸುತ್ತೋಲೆ ಸಂಖ್ಯೆ :ಸಚುಪ್ರಾ/ಆಡಳಿತ/ಕೋವಿಡ್–19/6(5) ಸುತ್ತೋಲೆ/2022 ದಿನಾಂಕ : 20.01.2022**

**3) ಸರ್ಕಾರದ ಪತ್ರ ಸಂಖ್ಯೆ:ಸಿಒ.03.ಸಿಎಲ್ಎಮ್.2022(ಇ) ದಿನಾಂಕ : 11.02.2022**

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ಗಮನವನ್ನು ಸೆಳೆಯಲಾಗಿದೆ. ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಕೋವಿಡ್–19ರ 3ನೇ ಅಲೆಯ ಓಮಿಕ್ರಾನ್ ತಳಿಯು ಸಾಂಕ್ರಾಮಿಕವಾಗಿ ಹರಡುತ್ತಿರುವ ಕಾರಣ ಸಹಕಾರ ಸಂಘಗಳ /ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ಮಾರ್ಚ್–2022 ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲು ಕ್ರಮವಿಡುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ಧ ಸಹಕಾರಿಗಳ ಆಡಳಿತಮಂಡಳಿ ಸಾಮಾನ್ಯ ಚುನಾವಣೆಗಳನ್ನು ಮತ್ತು ಆಡಳಿತಮಂಡಲಿಯಲ್ಲಿ ಖಾಲಿಬಿದ್ದ ನಿರ್ದೇಶಕರ ಸ್ಥಾನದ ಚುನಾವಣೆಗಳನ್ನು ಮಾರ್ಚ್–2022ರವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಅನೇಕ ಸಹಕಾರಿಗಳು, ಜನಪ್ರತಿನಿಧಿಗಳು ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ರಾಜ್ಯದಲ್ಲಿನ ಹಲವಾರು ವಲಯಗಳಿಗೆ ಕೋವಿಡ್ ನಿರ್ಬಂಧಗಳಿಗೆ ರಾಜ್ಯ ಸರ್ಕಾರವು ವಿನಾಯಿತಿ ನೀಡಿರುವುದರಿಂದ ಸಹಕಾರ ಸಂಘ ಮತ್ತು ಬ್ಯಾಂಕುಗಳ ಹಿತದೃಷ್ಟಿಯಿಂದ ಚುನಾವಣೆಗಳನ್ನು ನಡೆಸಲು ಅನುಮತಿ ನೀಡುವುದು ಸೂಕ್ತವಾದುದರಿಂದ ಸಹಕಾರ ಸಂಘಗಳ/ ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಆಡಳಿತಮಂಡಲಿ ಚುನಾವಣೆಗಳನ್ನು ಸೇರಿದಂತೆ ಎಲ್ಲಾ ಚುನಾವಣೆಗಳನ್ನು ನಡೆಸಲು ಸೂಕ್ತ ಸುತ್ತೋಲೆ ಹೊರಡಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಉಲ್ಲೇಖ(2)ರ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ಧ ಸಹಕಾರಿಗಳ ಸಾಮಾನ್ಯ ಚುನಾವಣೆ ಮತ್ತು ಆಡಳಿತಮಂಡಲಿಯಲ್ಲಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನಗಳ ಚುನಾವಣೆಯನ್ನು ನಡೆಸಲು ವಿಧಿಸಿದ್ದ ನಿರ್ಬಂಧವನ್ನು ತೆರವುಗೊಳಿಸಿ, ಚುನಾವಣೆಗೆ ಬಾಕಿ ಇರುವ ರಾಜ್ಯದ ಎಲ್ಲಾ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಪೂರ್ವದಲ್ಲಿ ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪ್ರಾರಂಭಿಸಿ, ಕೋವಿಡ್–19ರ ಮಾರ್ಗಸೂಚಿಗಳನ್ನು ಅನುಸರಿಸಿ ಚುನಾವಣಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ತಿಳಿಸಿದೆ.

**(ಡಾ: ಎನ್.ಎಸ್.ಚನ್ನಪ್ಪಗೌಡ)**

ಆಯುಕ್ತರು

ಸಹಕಾರ ಚುನಾವಣಾ ಪ್ರಾಧಿಕಾರ,

ಬೆಂಗಳೂರು.

# ಎಂಎಸ್‌ಎಂಇಗಳಿಗೆ ನೀಡುವ ಸಾಲಕ್ಕೆ ಸರಕಾರದ ಖಾತರಿ - ಸಹಕಾರ ಬ್ಯಾಂಕುಗಳಿಗೂ ಅವಕಾಶ

▸▸ ಸುಧಾಕರ ಭಟ್, ಬ್ಯಾಂಕಿಂಗ್ ಸಲಹೆಗಾರ

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ) ದೇಶದಲ್ಲಿ ಅತೀ ಹೆಚ್ಚು ಉದ್ಯೋಗ ಒದಗಿಸುತ್ತಿದ್ದು, ಇವು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಈ ಉದ್ಯಮಕ್ಕೆ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡಲು ಬ್ಯಾಂಕುಗಳು ಹಿಂಜರಿಯುತ್ತಿರುವುದನ್ನು ಮನಗಂಡು ಕೇಂದ್ರ ಸರ್ಕಾರವು 2007ರಲ್ಲಿ ಮೈಕ್ರೋ ಮತ್ತು ಸಣ್ಣ ಉದ್ಯಮಗಳಿಗೆ ಗ್ಯಾರಂಟಿ ಫಂಡ್ ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯ ಲಾಭ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ ಬೇರೆ ಬ್ಯಾಂಕುಗಳಿಗೆ ದೊರೆಯುತ್ತಿತ್ತು. ಈ ಯೋಜನೆಯನ್ನು ಸಹಕಾರ ಬ್ಯಾಂಕುಗಳಿಗೂ ವಿಸ್ತರಿಸಲು ಮಹಾಮಂಡಳ ಸತತ ಪ್ರಯತ್ನ ನಡೆಸುತ್ತಿತ್ತು. ಈ ಪ್ರಯತ್ನದ ಫಲವಾಗಿ ಸೆಪ್ಟೆಂಬರ್ 2019ರಂದು ಷೆಡ್ಯೂಲ್ಡ್ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಮತ್ತು ಫೆಬ್ರವರಿ 3, 2022ರಂದು ಇತರ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಈ ಯೋಜನೆಯ ವ್ಯಾಪ್ತಿಯಲ್ಲಿ ತರಲಾಯಿತು. ಕನಿಷ್ಠ 9% ಸಿಆರ್‌ಎಆರ್, ಹಿಂದಿನ ಆರ್ಥಿಕ ವರ್ಷದಲ್ಲಿ ಲಾಭ, ಒಟ್ಟು ಸುಸ್ತಿ ಸಾಲದ ಪ್ರಮಾಣ 5% ಅಥವಾ ಕಡಿಮೆ, ಸಿಆರ್‌ಆರ್ ಮತ್ತು ಎಲ್‌ಎಲ್‌ಆರ್‌ಗಳಲ್ಲಿ ನಿಗದಿತ ಹೂಡಿಕೆ ಮತ್ತು ಯಾವುದೇ ಪ್ರಮುಖ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕಾಳಜಿಗಳಿಲ್ಲದ ಪಟ್ಟಣ ಸಹಕಾರ ಬ್ಯಾಂಕುಗಳು ಮಾತ್ರ ಈ ಯೋಜನೆಯ ಲಾಭ ಪಡೆಯಬಹುದಾಗಿದೆ. ಈ ಯೋಜನೆಯ ಪ್ರಮುಖ ರೂಪರೇಷೆಗಳು ಕೆಳಗಿನಂತಿವೆ.

ಈ ಯೋಜನೆಯಲ್ಲಿ ಭಾಗವಹಿಸಲು ಅರ್ಹತೆ ಪಡೆದ ಪಟ್ಟಣ ಸಹಕಾರ ಬ್ಯಾಂಕುಗಳು, ಯೋಜನೆಯಲ್ಲಿ ಭಾಗಿಯಾಗಲು ಇಚ್ಛಿಸಿದರೆ ಸಿ.ಜಿ.ಟಿಎಂಎಸ್‌ಇ, ಎಸ್‌ಐಡಿಬಿಐ, ಸ್ವಾವಲಂಬನ್ ಭವನ್, 7ನೇ ಅಂತಸ್ತು, ಸಿ–11, ಜಿ–ಬ್ಲಾಕ್, ಬಾಂದ್ರಾ–ಕರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂ), ಮುಂಬಯಿ–400 051 ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕಾಗಿದೆ. ಅರ್ಜಿಯೊಂದಿಗೆ ಬ್ಯಾಂಕಿಂಗ್ ಲೈಸೆನ್ಸ್‌ನ ಪ್ರತಿ, ಲೆಕ್ಕಪರಿಶೋಧಿತ ಆಢಾವೆ ಪತ್ರ ಮತ್ತು ಮೇಲೆ ತಿಳಿಸಿದ ಕನಿಷ್ಠ ಅರ್ಹತೆಗಳನ್ನು ಹೊಂದಿರುವ ದೃಢೀಕರಣ ಪತ್ರಗಳನ್ನು ಲಗತ್ತಿಸಿ.

**ಅರ್ಹ ಸಾಲಗಳು :** ಎಂಎಸ್‌ಎಂಇಗಳಿಗೆ ನೀಡಿದ ರೂ.2ಕೋಟಿವರೆಗಿನ ಎಲ್ಲಾ ಅಸುರಕ್ಷಿತ ಸಾಲಗಳು ಈ ಯೋಜನೆಯ ವ್ಯಾಪ್ತಿಯಲ್ಲಿ ಬರುತ್ತವೆ. ಸುಸ್ತಿಯಲ್ಲದ ಮತ್ತು ಒಂದು ದಿನದ ಬಾಕಿಯೂ ಇಲ್ಲದ, ಉದ್ಯೋಗ ಆಧಾರ ಸಂಖ್ಯೆ ಹೊಂದಿರುವ ಸಾಲಗಳಿಗೆ ಮಾತ್ರ ಯೋಜನೆಯ ಲಾಭ ದೊರೆಯುತ್ತದೆ.

ಸ್ವ–ಸಹಾಯ ಗುಂಪು ಮತ್ತು ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಸಾಲಗಳಿಗೆ ಯೋಜನೆಯ ಲಾಭ ದೊರೆಯುವುದಿಲ್ಲ. ಅವಧಿ ಸಾಲ ಮತ್ತು ಕಾರ್ಯ ಬಂಡವಾಳ (Working Capital) ಗಳು ಅರ್ಹ ಸಾಲಗಳಾಗಿವೆ. ಒಬ್ಬ ಸಾಲಗಾರ ತನ್ನ ಜೀವನಾವಧಿಯಲ್ಲಿ ಕೇವಲ ಒಮ್ಮೆ ಮಾತ್ರ ಇದರ ಲಾಭ ಪಡೆಯಬಹುದು. ಸಾಲ ಸುಸ್ತಿಯಲ್ಲದಿದ್ದಲ್ಲಿ ಯಾವುದೇ ಅವಧಿಯಲ್ಲಿ ಬ್ಯಾಂಕು ಸಾಲವನ್ನು ಯೋಜನೆಗೆ ಸೇರಿಸಬಹುದು.

**ವಾರ್ಷಿಕ ಗ್ಯಾರಂಟಿ ಶುಲ್ಕ :** ಯೋಜನೆಯ ಲಾಭ ಪಡೆಯಬೇಕಾದರೆ ಬ್ಯಾಂಕುಗಳು ಟ್ರಸ್ಟ್‌ಗೆ ವಾರ್ಷಿಕ ಗ್ಯಾರಂಟಿ ಶುಲ್ಕವನ್ನು ತೆರಬೇಕಾಗಿದೆ. ಈ ಶುಲ್ಕವು ಬಾಕಿ ಇರುವ ಸಾಲದ ಮೊತ್ತಕ್ಕೆ ಅನುಗುಣವಾಗಿ ಕನಿಷ್ಠ 1% ಮತ್ತು ಗರಿಷ್ಠ 2% ಇರುತ್ತದೆ. ಈ ಶುಲ್ಕದೊಂದಿಗೆ ಟ್ರಸ್ಟ್ ನಿರ್ಧರಿಸುವ ಅಪಾಯದ ಪ್ರೀಮಿಯಂನ್ನು ಕೂಡಾ ನೀಡಬೇಕಾಗುತ್ತದೆ. ಮಹಿಳಾ ಉದ್ಯಮಿಗಳಿಗೆ ಶುಲ್ಕದಲ್ಲಿ ಸ್ವಲ್ಪ ರಿಯಾಯಿತಿ ಇದೆ.

**ಗ್ಯಾರಂಟಿ ಪ್ರಮಾಣ :** ಟ್ರಸ್ಟ್ ಬ್ಯಾಂಕುಗಳಿಗೆ ನೀಡುವ ಮೊತ್ತವು ವೈಯಕ್ತಿಕ ಸಾಲದ ಪ್ರಮಾಣಕ್ಕನುಗುಣವಾಗಿದೆ. ರೂ.5ಲಕ್ಷದವರೆಗೆ ಸೂಕ್ಷ್ಮ ಉದ್ಯಮಿಗಳಿಗೆ ನೀಡಿದ ಸಾಲ ಸುಸ್ತಿಯಾದಲ್ಲಿ ಬಾಕಿ ಇರುವ ಸಾಲದ ಮೊತ್ತದ ಶೇ.85ರಷ್ಟು ಅಥವಾ ರೂ.4.25ಲಕ್ಷ ಯಾವುದು ಕಡಿಮೆಯೋ ಅಷ್ಟು ಮೊತ್ತವು ಬ್ಯಾಂಕುಗಳಿಗೆ ತಕ್ಷಣ ದೊರೆಯುತ್ತದೆ. ಇತರ ಎಲ್ಲಾ ಸಾಲಗಳು (ಚಿಲ್ಲರೆ ವ್ಯಾಪಾರ ಹೊರತುಪಡಿಸಿ) ಸುಸ್ತಿಯಾದರೆ ಬಾಕಿ ಇರುವ ಸಾಲದ ಶೇ.75ರಷ್ಟು ಅಥವಾ ರೂ.150 ಲಕ್ಷ ಯಾವುದು ಕಡಿಮೆಯೋ ಅಷ್ಟು ಮೊತ್ತವು ಟ್ರಸ್ಟ್‌ನಿಂದ ದೊರೆಯುತ್ತದೆ. ಸೂಕ್ಷ್ಮ ಮತ್ತು ಸಣ್ಣ ಉದ್ಯಮಿಗಳಿಗೆ ಚಿಲ್ಲರೆ ವ್ಯಾಪಾರಕ್ಕಾಗಿ ಸಾಲ ನೀಡಿದ್ದರೆ ಕೇವಲ ರೂ. 1ಕೋಟಿವರೆಗಿನ ಸಾಲಕ್ಕೆ ಖಾತರಿ ಇದ್ದು, ಈ ಸಾಲಗಳು ಸುಸ್ತಿಯಾದರೆ, ಬಾಕಿ ಇರುವ ಸಾಲದ ಶೇ.50ರಷ್ಟು ಅಥವಾ ರೂ.50 ಲಕ್ಷ ಯಾವುದು ಕಡಿಮೆಯೋ ಅಷ್ಟು ಮೊತ್ತ ಟ್ರಸ್ಟ್‌ನಿಂದ ದೊರೆಯುತ್ತದೆ.

**ಹಕ್ಕು ಸಲ್ಲಿಕೆ :** ಸಾಲ ಸುಸ್ತಿಯಾದ ದಿನಾಂಕವನ್ನು ಮುಂದಿನ ತ್ರೈಮಾಸಿಕದ ಅಂತ್ಯದ ಒಳಗೆ ಟ್ರಸ್ಟ್‌ಗೆ ತಿಳಿಸಬೇಕು. ಸಾಲ ಸುಸ್ತಿಯಾದ ದಿನಾಂಕದಿಂದ ಮೂರು ವರ್ಷಗಳೊಳಗೆ ಖಾತರಿಪಡಿಸಿದ ಹಣ ನೀಡಲು ಅರ್ಜಿ ಸಲ್ಲಿಸಬೇಕು. ಬೇಡಿಕೆ ಸಲ್ಲಿಸಿದ 30 ದಿನಗಳೊಳಗೆ ಟ್ರಸ್ಟ್ ಹಣ ಸಂದಾಯ ಮಾಡುತ್ತದೆ. ಇಲ್ಲಿ ನೆನಪಿಡಬೇಕಾದ ಅಂಶವೆಂದರೆ, ಟ್ರಸ್ಟ್‌ನಿಂದ ಹಣ ಬಂದರೂ ಬ್ಯಾಂಕಿನ ಜವಾಬ್ದಾರಿ ಕೊನೆಗೊಳ್ಳುವುದಿಲ್ಲ. ಸಾಲಕ್ಕೆ ಅಡಮಾನವಾಗಿ ಪಡೆದ ಆಸ್ತಿಯನ್ನು ಸಂರಕ್ಷಿಸಬೇಕು ಮತ್ತು ಅದನ್ನು ಮಾರಾಟ ಮಾಡಿ ಬಂದ ಹಣದಿಂದ ಟ್ರಸ್ಟ್‌ನಿಂದ ಪಡೆದ ಮೊತ್ತವನ್ನು ಹಿಂತಿರುಗಿಸಬೇಕು. ಟ್ರಸ್ಟ್‌ನ ಪೂರ್ಣ ಹಣ ಹಿಂತಿರುಗಿಸಿದ ನಂತರವೇ ವಸೂಲಾದ ಹಣವನ್ನು ಬಾಕಿ ಇರುವ ಸಾಲಕ್ಕೆ ಜಮಾ ಮಾಡಬಹುದು.

**ಬ್ಯಾಂಕುಗಳ ಜವಾಬ್ದಾರಿ :** ಈ ಯೋಜನೆಯ ಖಾತರಿ ಇಲ್ಲದಿದ್ದಲ್ಲಿ ಬ್ಯಾಂಕುಗಳು ಯಾವ ರೀತಿ ಸಾಲ ಮೌಲ್ಯಮಾಪನ ಮತ್ತು ವಿತರಣೆ ನಂತರ ಯಾವ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದವೂ, ಅದೇ ಎಚ್ಚರಿಕೆಯನ್ನು ಖಾತರಿ ಪಡೆದ ಸಾಲಗಳ ಬಗ್ಗೆಯೂ ತೆಗೆದುಕೊಳ್ಳತಕ್ಕದ್ದು. ಬ್ಯಾಂಕುಗಳು ಕರ್ತವ್ಯಹೀನರಾದದ್ದು ಕಂಡು ಬಂದರೆ ಟ್ರಸ್ಟ್‌ನಿಂದ ಪಡೆದ ಹಣವನ್ನು ಬಡ್ಡಿ ಸಮೇತ ಹಿಂತಿರುಗಿಸಬೇಕಾಗುತ್ತದೆ.

**ಸಹಕಾರ ಬ್ಯಾಂಕುಗಳಿಗೆ ಈ ಯೋಜನೆ ಲಾಭದಾಯಕವೇ? :** ಈ ಯೋಜನೆಯ ಲಾಭ ಪಡೆಯಬೇಕಾದಲ್ಲಿ ಸಾಲಕ್ಕೆ ಯಾವುದೇ ಮೇಲಾಧಾರ (Collateral Security) ಮತ್ತು ಅಥವಾ ಮೂರನೇ ವ್ಯಕ್ತಿಯ ಜಾಮೀನು ಇರಬಾರದು. ಅಂದರೆ, ಜಾಮೀನು ಇಲ್ಲದ ಅಸುರಕ್ಷಿತ ಸಾಲಕ್ಕೆ ಮಾತ್ರ ಯೋಜನೆಯಡಿಯಲ್ಲಿ ಖಾತರಿ ಸಿಗುತ್ತದೆ. ಟ್ರಸ್ಟ್ "ಹೈಬ್ರಿಡ್ ಸೆಕ್ಯೂರಿಟಿ" ಎನ್ನುವ ಯೋಜನೆಯನ್ನು ಕೂಡಾ 2018ರಿಂದ ಜಾರಿಗೆ ತಂದಿದೆ; ಅದರಡಿಯಲ್ಲಿ ಸಾಲ ಸೌಲಭ್ಯದ ಒಂದು ಭಾಗಕ್ಕೆ ಮೇಲಾಧಾರ ಭದ್ರತೆಯನ್ನು ಅನುಮತಿಸಲಾಗುವುದು ಮತ್ತು ರೂ.200ಲಕ್ಷದವರೆಗಿನ ಜಾಮೀನು ಇಲ್ಲದ ಅಸುರಕ್ಷಿತ ಭಾಗಕ್ಕೆ ಟ್ರಸ್ಟ್‌ನ ಖಾತರಿ ಪಡೆಯಬಹುದು. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ, ಸಿಆರ್‌ಎಆರ್ ಶೇ.9 ಅಥವಾ ಅಧಿಕವಿದ್ದು, ಬೇಡಿಕೆ ಮತ್ತು ಸಮಯದ ಹೊಣೆಗಾರಿಕೆ (ಡಿ.ಟಿ.ಎಲ್) ರೂ.100ಕೋಟಿಗಿಂತ ಜಾಸ್ತಿಯಿರುವ ಪಟ್ಟಣ ಸಹಕಾರ ಬ್ಯಾಂಕುಗಳು ನೀಡಬಹುದಾದ ಗರಿಷ್ಠ ಅಸುರಕ್ಷಿತ ಸಾಲದ ಮೊತ್ತ ರೂ.5ಲಕ್ಷ. ಚಿಕ್ಕ ಬ್ಯಾಂಕುಗಳಲ್ಲಿ ಈ ಮಿತಿ ಇನ್ನೂ ಕಡಿಮೆಯಿದೆ. ಹೀಗಿರುವಾಗ, ರಿಜರ್ವ್ ಬ್ಯಾಂಕು ತನ್ನ ಮಾರ್ಗಸೂಚಿಯಲ್ಲಿ ಬದಲಾವಣೆ ತಂದ ಹೊರತು ಪಟ್ಟಣ ಸಹಕಾರ ಬ್ಯಾಂಕುಗಳು ಈ ಯೋಜನೆಯ ಪೂರ್ಣ ಲಾಭ ಪಡೆಯುವಂತಿಲ್ಲ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಮಾರ್ಚ್ 31, 2021ರಂದು ನಮ್ಮ ಬ್ಯಾಂಕಿನ ಒಟ್ಟು ಠೇವಣಿ ರೂ.100 ಕೋಟಿಗಿಂತ ಕಡಿಮೆ ಇದ್ದು ಸದ್ಯಕ್ಕೆ ಠೇವಣಿ ಮೊತ್ತ ರೂ.100ಕೋಟಿ ಮೀರಿದೆ. ನಮ್ಮ ಬ್ಯಾಂಕು ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಟೈಯರ್–I ಅಥವ ಟೈಯರ್ – II ಎಂಬುದರ ಬಗ್ಗೆ ಮಾಹಿತಿ ನೀಡಿ. ಹೀಗಿರುವಾಗ, ವಾಣಿಜ್ಯ ರಿಯಲ್ ಎಸ್ಟೇಟ್‌ಗಾಗಿ ಸಾಲ ನೀಡಬಹುದೇ? ಹೌದಾದರೆ, ಗೃಹ ಸಾಲಕ್ಕೆ ಸಂಬಂಧಿಸಿದ ಮಿತಿ ವಾಣಿಜ್ಯ ರಿಯಲ್ ಎಸ್ಟೇಟ್ ಸಾಲಕ್ಕೂ ಅನ್ವಯಿಸುವುದೇ? ವಾಣಿಜ್ಯ ರಿಯಲ್ ಎಸ್ಟೇಟ್ ಸಾಲಕ್ಕೆ ಇರುವ ಗರಿಷ್ಠ ಮಿತಿ ಯಾವುದು?**

**– ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ.**

**ಉತ್ತರ :** ಬ್ಯಾಂಕು ಶ್ರೇಣಿ-I ಅಥವಾ ಶ್ರೇಣಿ–IIರಲ್ಲಿ ಇದೆಯೇ ಎಂದು ನಿರ್ಧರಿಸಲು ಬ್ಯಾಂಕಿನ ತಕ್ಷಣದ ಹಿಂದಿನ ಹಣಕಾಸು ವರ್ಷದಲ್ಲಿನ ಠೇವಣಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದರಂತೆ, ಮಾರ್ಚ್ 31, 2021ರಲ್ಲಿ ನಿಮ್ಮ ಠೇವಣಿ ರೂ.100 ಕೋಟಿಗಿಂತ ಕಡಿಮೆ ಇದ್ದರೆ ನಿಮ್ಮ ಬ್ಯಾಂಕು ಶ್ರೇಣಿ-I ರಲ್ಲಿ ಇದೆ ಎಂದು ತಿಳಿಯಬೇಕು. ಶ್ರೇಣಿ-I ರಲ್ಲಿರುವ ಬ್ಯಾಂಕು ವಾಣಿಜ್ಯ ರಿಯಲ್ ಎಸ್ಟೇಟ್‌ಗೆ ಸಾಲ ನೀಡಬಹುದು. ವಸತಿ ಸಾಲದ (Housing Loan) ವೈಯಕ್ತಿಕ ಸಾಲಗಾರನ ಮಿತಿ (ರೂ.30 ಲಕ್ಷ) ವಾಣಿಜ್ಯ ರಿಯಲ್ ಎಸ್ಟೇಟ್ ಸಾಲ ನೀಡಲು ಅನ್ವಯಿಸುವುದಿಲ್ಲ. ವಾಣಿಜ್ಯ ರಿಯಲ್ ಎಸ್ಟೇಟ್‌ಗೆ ಗರಿಷ್ಠ ಸಾಲವು ಬ್ಯಾಂಕಿನ ವೈಯಕ್ತಿಕ ಸಾಲದ ಮಿತಿಯೊಳಗೆ (ಶ್ರೇಣಿ-I ಬಂಡವಾಳದ ಶೇಕಡಾ 15ರಷ್ಟು) ಇರಬೇಕು ಮತ್ತು ಬ್ಯಾಂಕು ರಿಯಲ್ ಎಸ್ಟೇಟ್‌ಗಾಗಿ ನೀಡಬಹುದಾದ ಒಟ್ಟು ಸಾಲದ ಮಿತಿಯೊಳಗಿರಬೇಕು (ಒಟ್ಟು ಆಸ್ತಿಯ ಶೇ.10ರಷ್ಟು).

**02. ಇತ್ತೀಚೆಗೆ ಸ್ಥಳೀಯ ಕ್ಲಿಯರಿಂಗ್‌ನಲ್ಲಿ ತೊಂದರೆಗಳನ್ನು ಎದುರಿಸುತ್ತಿದ್ದೇವೆ. ಭಾರತೀಯ ಸ್ಟೇಟ್ ಬ್ಯಾಂಕು "ರೂ.50,000ದ ಮೇಲಿನ ಅಕೌಂಟ್ ಪೇಯಿ ಚೆಕ್ಕುಗಳನ್ನು "ಗ್ರಾಹಕರನ್ನು ಹೊರತುಪಡಿಸಿ ಇತರರಿಗೆ ಪಾವತಿಸುವಂತಿಲ್ಲ" ಎಂಬ ಕಾರಣ ನೀಡಿ ಹಿಂತಿರುಗಿಸುತ್ತಿದೆ. ಬೇರೆ ಬ್ಯಾಂಕುಗಳು ಈ ಕಾರಣ ನೀಡಿ ಚೆಕ್ಕುಗಳನ್ನು ಹಿಂತಿರುಗಿಸುತ್ತಿಲ್ಲ. ಈ ಬಗ್ಗೆ ನಮಗೆ ಸರಿಯಾದ ಮಾಹಿತಿ ನೀಡಿ.**

**– ರೇವಣಸಿದ್ದೇಶ್ವರ ಸಹಕಾರ ಬ್ಯಾಂಕ್ ಲಿ., ಇಂಡಿ.**

**ಉತ್ತರ :** ಸಹಕಾರ ಸಂಘಗಳ ಗ್ರಾಹಕರ ಹೆಸರಿನಲ್ಲಿರುವ ರೂ.50,000/– ವರೆಗಿನ ಚೆಕ್ಕುಗಳನ್ನು ಹೊರತುಪಡಿಸಿ, ಬೇರೆ "ಖಾತೆ ಪಾವತಿದಾರ" ಚೆಕ್ಕುಗಳನ್ನು ಅದರಲ್ಲಿ ಹೆಸರಿಸಲಾದ ಪಾವತಿದಾರರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಯ ಖಾತೆಗೆ ಜಮಾ ಮಾಡುವುದನ್ನು ಭಾರತೀಯ ರಿಜರ್ವ್ ಬ್ಯಾಂಕು ತನ್ನ ದಿನಾಂಕ ಜನವರಿ 22, 2014ರ ಸುತ್ತೋಲೆಯಲ್ಲಿ ನಿಷೇಧಿಸಿದೆ. ನಿಮ್ಮ ಬ್ಯಾಂಕು ಚೆಕ್ಕುಗಳನ್ನು ಕ್ಲಿಯರಿಂಗ್‌ಗೆ ಕಳಿಸುವಾಗ "ಪಾವತಿದಾರರ ಖಾತೆಗೆ ಜಮಾ ಮಾಡಲಾಗುವುದು" ಎಂದು ದೃಢೀಕರಿಸುವುದರಿಂದ ನಿಮ್ಮ ಚೆಕ್ಕುಗಳನ್ನು ಹಿಂತಿರುಗಿಸುವ ಪ್ರಮೇಯೇ ಇರುವುದಿಲ್ಲ.

## ಗೃಹ ಸಾಲ ಪಡೆಯುವುದಾದರೆ ಮಾರ್ಚ್ 31ರೊಳಗೆ ಪಡೆಯಿರಿ : ಇಲ್ಲವೇ ತೆರಿಗೆ ಕಡಿತದ ಸೌಲಭ್ಯ ಕೈತಪ್ಪಬಹುದು

**ಹೊಸದಿಲ್ಲಿ :** ನೀವು ಅಫರ್ಡಬಲ್ ಹೌಸಿಂಗ್ ಯೋಜನೆಯ ಅಡಿಯಲ್ಲಿ ಗೃಹ ಸಾಲವನ್ನು ಖರೀದಿಸಿ ಹೆಚ್ಚುವರಿ ತೆರಿಗೆ ಕಡಿತದ ಸೌಲಭ್ಯವನ್ನು ಬಯಸುತ್ತಿದ್ದೀರಾ. ಹಾಗಾದರೆ 2022ರ ಮಾರ್ಚ್ 31ರ ದಿನಾಂಕವನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಸೂಕ್ತ.



ಏಕೆಂದರೆ ಅಫರ್ಡಬಲ್ ಹೌಸಿಂಗ್‌ಗೆ ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 80ಇಇಎ ಅಡಿಯಲ್ಲಿ ಹೆಚ್ಚುವರಿ ತೆರಿಗೆ ಕಡಿತದ ಸೌಲಭ್ಯ ಪಡೆಯಲು ಕೊನೆಯ ದಿನ 2022ರ ಮಾರ್ಚ್ 31 ಆಗಿದೆ. ಅಷ್ಟರೊಳಗೆ ಗೃಹಸಾಲ ಮಂಜೂರಾಗಿರಬೇಕು. 2022ರ ಏಪ್ರಿಲ್ 1ರಿಂದ ಹೆಚ್ಚುವರಿ ತೆರಿಗೆ ಕಡಿತದ ಸೌಲಭ್ಯ ಸಿಗುವುದಿಲ್ಲ. ಏಕೆಂದರೆ ಇತ್ತೀಚಿನ ಕೇಂದ್ರ ಬಜೆಟ್‌ನಲ್ಲಿ ಈ ಸೌಲಭ್ಯವನ್ನು ಮುಂಬರುವ 2022–23ರ ಸಾಲಿಗೆ ವಿಸ್ತರಿಸಿಲ್ಲ.

ಸೆಕ್ಷನ್ 80ಇಇಎ ಅಡಿಯಲ್ಲಿ ಹೆಚ್ಚುವರಿ 1.5ಲಕ್ಷ ರೂ.ಗಳ ಬಡ್ಡಿ ಪಾವತಿಯ ಮೇಲೆ ತೆರಿಗೆ ಕಡಿತ ಸೌಲಭ್ಯವನ್ನು ಅಫರ್ಡಬಲ್ ಹೌಸ್ ವಿಭಾಗದಲ್ಲಿ ಪಡೆಯಬಹುದು. ಸೆಕ್ಷನ್ 24ರ ಅಡಿಯಲ್ಲಿ 2ಲಕ್ಷ ರೂ.ತನಕ ಬಡ್ಡಿ ಪಾವತಿಗೆ ತೆರಿಗೆ ಕಡಿತ ಪಡೆಯಬಹುದು. ಎರಡು ಸೇರಿಸಿ ಗೃಹ ಸಾಲದ ಬಡ್ಡಿಯ ಮೇಲೆ ಗರಿಷ್ಠ 3.5ಲಕ್ಷ ರೂ.ಗಳ ತೆರಿಗೆ ಕಡಿತವನ್ನು ಕ್ಲೇಮ್ ಮಾಡಬಹುದು.

ಸೆಕ್ಷನ್ 80ಇಇಎ ಅಡಿಯಲ್ಲಿ ಗೃಹ ಸಾಲದ ಬಡ್ಡಿಯ ಮೇಲೆ ಹೆಚ್ಚುವರಿ ತೆರಿಗೆ ಕಡಿತ ಪಡೆಯಲು ಕೆಲ ಷರತ್ತುಗಳಿವೆ. ಅವುಗಳು ಇಂತಿವೆ. ಗೃಹ ಸಾಲವು 2019ರ ಏಪ್ರಿಲ್ 1 ರಿಂದ 2022ರ ಮಾರ್ಚ್ 31ರೊಳಗೆ ಪಡೆದಿರಬೇಕು. ಮನೆ ಅಥವಾ ಫ್ಲ್ಯಾಟ್‌ನ ಬೆಲೆ 45ಲಕ್ಷ ರೂ. ಮೀರಕೂಡದು. ಖರೀದಿದಾರ ಇತರ ಯಾವುದೇ ಸ್ವಂತ ಮನೆ, ಫ್ಲ್ಯಾಂಟ್ ಹೊಂದಿರಬಾರದು.

# ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕೇರಳದ ಆಲಪ್ಪು ಜಿಲ್ಲಾಧಿಕಾರಿಯಾಗಿ ಡಾ. ರೇಣುರಾಜ್ ಅವರು ಅಧಿಕಾರ ವಹಿಸುವ ಮೂಲಕ ರಾಜ್ಯದ ಒಟ್ಟು ಹದಿನಾಲ್ಕು ಜಿಲ್ಲೆಗಳ ಪೈಕಿ 10 ಜಿಲ್ಲೆಗಳಲ್ಲಿ ಮಹಿಳೆಯರೇ ಜಿಲ್ಲಾಧಿಕಾರಿಯಾಗುವ ಹೆಗ್ಗಳಿಕೆಗೆ ರಾಜ್ಯ ಪಾತ್ರವಾಗಿದೆ.
- ಕೊರೋನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸಾಮಾಜಿಕ, ಕ್ರೀಡೆ, ಮನರಂಜನೆ, ಶೈಕ್ಷಣಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕೋವಿಡ್ ನಿರ್ಬಂಧಗಳನ್ನು ಸಡಿಲಿಸುವುದರ ಜೊತೆಗೆ ರಾತ್ರಿಯ ಕರ್ಫ್ಯೂ ರದ್ದುಗೊಳಿಸುವುದನ್ನು ಪರಿಗಣಿಸುವಂತೆ ಕೇಂದ್ರ ಗೃಹ ಸಚಿವಾಲಯ ಸೂಚನೆ ನೀಡಿದೆ.
- ರಷ್ಯಾ ದಾಳಿ ಆರಂಭಿಸಿದ ಎರಡು ದಿನಗಳಲ್ಲಿ ಆ ದೇಶದ 1,000ಕ್ಕೂ ಹೆಚ್ಚು ಸೈನಿಕರನ್ನು ಹತ್ಯೆ ಮಾಡಿರುವುದಾಗಿ ಉಕ್ರೇನ್ ಹೇಳಿಕೊಂಡಿದೆ.
- ಉಕ್ರೇನ್ ಮೇಲೆ ರಷ್ಯಾ ನಿರಂತರ ದಾಳಿ ನಡೆಸುತ್ತಿರುವ ಈ ಮಧ್ಯೆ ಉಕ್ರೇನಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸಕ್ಕೆ ತೆರಳಿರುವ ಕರ್ನಾಟಕ ಮೂಲದ 100ಕ್ಕೂ ಅಧಿಕ ವಿದ್ಯಾರ್ಥಿಗಳಲ್ಲಿ ಸಂಕಷ್ಟದಲ್ಲಿದ್ದಾರೆ.
- ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಇದೀಗ ಜಗತ್ತಿನ ಎಲ್ಲ ವಲಯಗಳ ಮೇಲೂ ಪರಿಣಾಮ ಬೀರಲು ಆರಂಭಿಸಿದ್ದು, ಇದೀಗ ಭಾರತೀಯ ಷೇರುಮಾರುಕಟ್ಟೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿ ಹೂಡಿಕೆದಾರರ 8 ಲಕ್ಷ ಕೋಟಿ ರೂ ನಷ್ಟವಾಗಿದೆ.
- ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಎಂಡಿ ಹಾಗೂ ಸಿಇಒ ವಿ. ವೈದ್ಯನಾಥನ್ ಅವರು ತಮ್ಮ ಬಳಿಯಿರೋ ಬ್ಯಾಂಕಿನ ರೂ. 3.95 ಕೋಟಿ ಮೌಲ್ಯದ 9 ಲಕ್ಷ ಷೇರುಗಳನ್ನು ಮನೆ ಕೆಲಸದ ಸಹಾಯಕ, ಡ್ರೈವರ್ ಹಾಗೂ ತರಬೇತುದಾರ ಸೇರಿದಂತೆ 5 ಜನರಿಗೆ ಮನೆಗಳನ್ನು ಖರೀದಿಸಲು ಉಡುಗೊರೆಯಾಗಿ ನೀಡಿದ್ದಾರೆ.
- ಇಂಡೋನೇಷ್ಯಾದಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ಭೂಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 6.2ರಷ್ಟು ದಾಖಲಾಗಿದ್ದು, 7 ಮಂದಿ ಮೃತಪಟ್ಟಿದ್ದು, 85 ಜನರಿಗೆ ಗಂಭೀರ ಗಾಯಗಳಾಗಿವೆ.

## ಓದುಗರ ಅನಿಸಿಕೆ...



**ಬಡವರು ಇನ್ನೂ ಬಡವರಾಗುತ್ತಿದ್ದಾರೆ :** ದೇಶದಲ್ಲಿ ಅಸಮಾನತೆ ಹೆಚ್ಚಾಗುತ್ತಿದೆ ಎಂಬ ಕಳವಳ ಜಾಸ್ತಿ ಆಗುತ್ತಿರುವ ಸಮಯದಲ್ಲಿ, ರೂ.7 ಕೋಟಿಗಿಂತ ಹೆಚ್ಚಿನ ಸಂಪತ್ತು ಹೊಂದಿರುವವರ ಪ್ರಮಾಣವು ಶೇಕಡ 11ರಷ್ಟು ಹೆಚ್ಚಳ ಆಗಿದೆ ಎಂದು ವರದಿಯೊಂದು ಹೇಳಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣವು ಜಾಸ್ತಿಯಾಗುವ ಸಂಭವವಿದೆ. ಪ್ರಸ್ತುತ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಿರಿವಂತರು ಮತ್ತೂ ಸಿರಿವಂತರಾಗುತ್ತಿದ್ದರೆ, ಬಡವರು ಇನ್ನೂ ಬಡವರಾಗುತ್ತಿದ್ದಾರೆ.

**ವಿನಯ್ ಶಂಕರ್ ಪಾಟೀಲ್, ರಾಯಚೂರು**

**ಓದಲೇಬೇಕಾದ ಲೇಖನ :** ಶ್ರೀ ರಾಜಗೋಪಾಲ ಸಂಗಮ ಅವರ ಲೇಖನ; ಪಟ್ಟಣ ಸಹಕಾರ ಬ್ಯಾಂಕುಗಳ ವಿಫಲತೆಗೆ ಕಾರಣಗಳ ಕುರಿತ ವಿಶ್ಲೇಷಣೆ ಉತ್ತಮವಾಗಿ ಮೂಡಿ ಬಂದಿತು. ಲೇಖನದಲ್ಲಿ ಬರೆದಿರುವ ಹಾಗೆ; ಸಹಕಾರ ಬ್ಯಾಂಕುಗಳ ಸೋಲುವಿಕೆಯನ್ನು ನಿಯಂತ್ರಿಸಿ, ಅವುಗಳ ಪುನಃಶ್ಚೇತನಗೊಳಿಸಲು ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಲು ಅಥವಾ ಪ್ರಸ್ತುತದಲ್ಲಿರುವ ಮೇಲ್ವಿಚಾರಣೆ ಮತ್ತು ನಿಯಂತ್ರಣ ನೀತಿಗಳಲ್ಲಿ ಪರಿಷ್ಕರಣೆ ಸೂಕ್ತವಾಗಿದೆ. ಈ ವಲಯದಲ್ಲಿರುವವರು ಓದಲೇಬೇಕಾದ ಲೇಖನ.

**ಅರಳಿಕೊಪ್ಪ ಮಲ್ಲೇಶ್, ಬೆಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.